**(ದಿನಾಂಕಃ 09.06.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

<u>ಪಾಟೀ ಸವಾಲುಃ ಜೆ.ಡಿ.ಆರ್ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದ ಃ-</u>

1. 1990 ನೇ ಸಾಲಿನಲ್ಲಿ ನಾನು ಮೆಸ್ಕಾಂ ನ ನೌಕರಸ್ಥನಾಗಿರುತ್ತೇನೆ. ಆಗ ಸದರಿ ಮೆಸ್ಕಾಂ ಸರ್ಕಾರಿ ಕಂಪನಿ ಆಗಿರುತ್ತದೆ. ನಾನು ಹಾರೋಹಿತ್ತಲು ಗ್ರಾಮದಲ್ಲಿ ಹಾಲಿ ವಾಸವಾಗಿದ್ದು ಮೆಸ್ಕಾಂ ನಲ್ಲಿ ಕೆಲಸ ಮಾಡುವಾಗ ರಿಪ್ಪನ್ ಪೇಟೆಯಲ್ಲಿ ವಾಸವಾಗಿದ್ದೆ ಎಂದು ನುಡಿಯುತ್ತಾರೆ.

2. ನನಗೆ ನಿವೇಶನೆ ಮಂಜೂರಾದಾಗ ನಾನು ಸರ್ಕಾರಿ ಕರ್ತವ್ಯದಲ್ಲಿ ಇದ್ದೆ ಎಂದು ಸೂಚಿಸಿದರೆ ಸರಿ. ಮಂಜುನಾಥ್ ಎಂಬ ಪೋಲಿಸ್ ನೌಕರಸ್ದರಿಗೂ ಸಹ ನಮ್ಮ ಜೊತೆ ನಿವೇಶನೆ ಮಂಜೂರಾಗಿರುತ್ತದೆ ಎಂದರೆ ಸರಿ.

3. ನನಗೆ ನಿವೇಶನೆ ಮಂಜೂರಾದ ಸಂದರ್ಬದಲ್ಲಿ ನಾನು ಹಾರೋಹಿತ್ತಲು ಗ್ರಾಮದಲ್ಲಿ ಮನೆಯನ್ನು ಹೊಂದಿದ್ದೆ ಎಂದು ಸೂಚಿಸಿದರೆ ಸರಿಯಲ್ಲ. ನನಗೆ ದಿನಾಂಕಃ 27.08.1991 ರಂದು ಹಕ್ಕು ಪತ್ರ ವಿತರಣೆ ಮಾಡಿದ ಜೊತೆ ಸ್ವಾಧೀನ ಪತ್ರವನ್ನು ಕೊಟ್ಟಿರುವುದಿಲ್ಲ ಎಂದು ಸೂಚಿಸಿದರೆ ಸರಿ. ಸಾಕ್ಷಿಯು ಸ್ವ ಇಚ್ಚೆಯಿಂದ ಮುಂದುವರಿದು ಕಂದಾಯದ ಹಣವನ್ನು ಕಟ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

4. ನಮಗೆ ಮಂಜೂರಾದ ಹಕ್ಕು ಪತ್ರದ ವಿರುದ್ದ ರಿಪ್ಪನ್ ಪೇಟೆ ಗ್ರಾಮಸ್ಥರು ಜಿಲ್ಲಾ ಪಂಚಾಯ್ತಿಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ. ನಾನು ನನ್ನ ದಾವಾ ಆಸ್ತಿಯ ಹಕ್ಕು ಪತ್ರ ರದ್ದಾದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಹೋಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ಹಕ್ಕು ಪತ್ರವನ್ನು ನನಗೆ ಗೊತ್ತಾಗದಂತೆ ರದ್ದು ಪಡಿಸಿದ್ದು ನನ್ನ ಪರವಾಗಿ ನ್ಯಾಯಾಲಯದ ಆದೇಶ ಮತ್ತು ಸ್ವಾಧೀನ ಇರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

5. ನಾನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ನನ್ನ ಮೇಲ್ಮನವಿ ಏಕ ಪೀಠ ಸದಸ್ಯದ ಮುಂದೆ ರದ್ದಾಗಿರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ನಾನು ಮಾನ್ಯ ಉಚ್ಚ ನ್ಯಾಯಾಲಯದ ಏಕ ಪೀಠದ ಆದೇಶದ ವಿರುದ್ಧ ರಿಟ್ ಅಪೀಲ್ ನಂಬರ್ 1196/2008 ಮತ್ತು 2276-79 ರ ಮೇಲ್ಮನವಿ ಅನ್ನು ಸಲ್ಲಿಸಿರುತ್ತೇನೆ ಎಂದು ಸೂಚಿಸಿದರೆ ಸರಿ.

6. ಸದರಿ ಮೇಲ್ಮನವಿಯು ಆದೇಶ ಆಗಿ ಸದರಿ ಆದೇಶದಲ್ಲಿ ಸರ್ಕಾರಿ ನೌಕರಸ್ಥರಿಗೆ ಮಂಜೂರಾದ ಸೈಟ್ ಅನ್ನು ರದ್ದುಪಡಿಸಿ ಸದರಿಯವರು ತುಂಬಿದ ಮೇಲ್ಕೊಡಿಗೆ ಹಣ ಬಡ್ಡಿ ಸಹಿತ ಹಿಂತಿರುಗಿಸುವಂತೆ ಆದೇಶ ಮಾಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ.

7. ರಿಪ್ಪನ್ ಪೇಟೆ ಗ್ರಾಮ ಪಂಚಾಯ್ತಿ ಅಧಿಕಾರಿಯವರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಮ್ಮ ಹಕ್ಕು ಪತ್ರವನ್ನು ಮತ್ತು ಖಾತೆಯನ್ನು ರದ್ದುಪಡಿಸಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ.

8. ನನಗೆ ನಮ್ಮ ದಾವಾ ಆಸ್ತಿಯ ಹಕ್ಕು ಪತ್ರ ರದ್ದಾದ ವಿಷಯ 1999 ರಲ್ಲಿ ಗೊತ್ತಾಗಿರುತ್ತದೆ. ನನಗೆ ಹಕ್ಕುಪತ್ರ ರದ್ದಾದ ವಿಷಯ ಹೇಗೆ ಗೊತ್ತಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ರದ್ದಾಗ ವಿಷಯ ಪ್ರಾಧೀಕಾರದಿಂದ ನೋಟಿಸ್ ಬಂದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

9. 1999 ರಿಂದ 2008 ರವರೆಗೆ ಹಕ್ಕು ಪತ್ರ ರದ್ದಾದ ಕುರಿತು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನಾನು ಇದೇ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇದೇ ಪ್ರತಿವಾದಿಗಳ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ಸೂಚಿಸಿದರೆ ಸರಿ.

(ಈ ಹಂತದಲ್ಲಿ ಜೆ.ಡಿ.ಆರ್ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಹೊಸನಗರ.